# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 95/2024**

ಸಾಕ್ಷಿದಾರರ ಹೆಸರು - ಸಿ.ಬಿ.ರುದ್ರೇಶ್ ಡಿಡಬ್ಲೂ -02
ತಂದೆಯ ಹೆಸರು - ಸಿ.ಇ.ಬಸವರಾಜ್
ವಯಸ್ಸು - 48 ವರ್ಷ
ಉದ್ಯೋಗ - ವಕೀಲರು
ವಾಸ ಸ್ಥಳ - ಚಿಕ್ಕಮಗಳೂರು

***(The accused is in judicial custody and today he is produced through video conferencing from District Prison, Chikkamagaluru and before recording the evidence of witness, it is got confirmed from the accused that the voice is clearly audible to him.)***

ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿಯ ಪರವಾಗಿ LADCS ನ Deputy Chief Defense counsel ಆದ ಶ್ರೀ ಎನ್ ಡಿ ವಕೀಲರಿಂದಃ**

1. ನಾನು 2022 ರಿಂದ 2024 ರವರೆಗೆ ಚಿಕ್ಕಮಗಳೂರು ವಕೀಲರ ಸಂಘದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದೆನು.
2. ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ

ಹಾಜರುಪಡಿಸಿದ ಆರೋಪಿ ಗೊತ್ತು, ಆತ ಈ ಹಿಂದೆ ನಮ್ಮ ಸಂಘದ ಸದಸ್ಯರಾಗಿದ್ದರು, ನಂತರದಲ್ಲಿ ಅವರು ಸದಸ್ಯತ್ವ ಶುಲ್ಕವನ್ನು ಕಟ್ಟದ ಕಾರಣ ಅವರನ್ನು ಸಂಘದಿಂದ ತೆಗೆದು ಹಾಕಲಾಗಿದೆ.

3. ದಿಃ 18-12-2023 ರಂದು ನಾನು ಚಿಕ್ಕಮಗಳೂರು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಮತ್ತು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರವರಿಗೆ ಒಂದು ಮನವಿಯನ್ನು ಸಲ್ಲಿಸಿ ನಮ್ಮ ಸಂಘದ ಸದಸ್ಯರಾಗಿದ್ದ ಪೂರ್ಣೇಶರವರು ಮಾನಸಿಕ ಅನಾರೋಗ್ಯದಿಂದ ಬಳಲುತ್ತಿದ್ದ ಕಾರಣ ಅವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆಯ ಅಗತ್ಯ ಇದ್ದು ಅವರನ್ನು ನೋಡಿಕೊಳ್ಳಲು ಅವರ ಕುಟುಂಬದಲ್ಲಿ ಯಾರು ಮುಂದೆ ಬಾರದಿದ್ದ ಕಾರಣ ಅವರ ಅನಾರೋಗ್ಯಕ್ಕೆ ಚಿಕಿತ್ಸೆ ಕೊಡಿಸಲು ಕ್ರಮ ತೆಗೆದುಕೊಳ್ಳಲು ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ನಿರ್ದೇಶನ ಕೊಡುವಂತೆ ಸಂಘದ ಪರವಾಗಿ ಮನವಿ ಸಲ್ಲಿಸಿದ್ದೆನು. ಸದರಿ ಮನವಿಯ ದೃಢೀಕೃತ ನಕಲನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ.2 ಮತ್ತು ಸಹಿಯನ್ನು ನಿಡಿ.2(ಎ) ಎಂದು ಗುರುತಿಸಲಾಯಿತು.

4. ಸದರಿ ನ್ಯಾಯಾಧೀಶರು ನನ್ನ ಮನವಿಯ ಮೇರೆಗೆ ಕ್ರಿಮಿನಲ್ ಮಿಸ್.307/2023 ರಂತೆ ಪ್ರಕರಣವನ್ನು ದಾಖಲಿಸಿ ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಆರೋಪಿಯನ್ನು ಬೆಂಗಳೂರಿನ ನಿಮಾನ್ಸ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಕೊಡಿಸುವಂತೆ ಸೂಚಿಸಿದ್ದರು. ಕ್ರಿಮಿನಲ್ ಮಿಸ್ 307/2023 ಪ್ರಕರಣದ ಆದೇಶದ ಪುಟಗಳ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ.3

ಎಂದು ಗುರುತಿಸಲಾಯಿತು.

5. ಆರೋಪಿಯ ವರ್ತನೆ ಸಾಮಾನ್ಯರಿಗಿಂತ ವಿಭಿನ್ನವಾಗಿತ್ತು. ಹಾಗಾಗಿ ನಾನು ಮೇಲೆ ಹೇಳಿದ ಮನವಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೆನು.

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ</u>

6. ಆರೋಪಿಯನ್ನು ನಿಮ್ಮ ಸಂಘದ ಸದಸ್ಯತ್ವದಿಂದ ತೆಗೆದು ಹಾಕಲಾಗಿದೆ ಎಂದು ತೋರಿಸಲು ನೀವು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನೀವು ನಿಡಿ.2 ಮನವಿಯಲ್ಲಿ ಆರೋಪಿ ಮನಾಸಿಕ ಅನಾರೋಗ್ಯದಿಂದ ಬಳಲುತ್ತಿದ್ದು ಆತನಿಗೆ ಸೂಕ್ತ ವೈದ್ಯಕೀಯ  ನೆರವಿನ ಅಗತ್ಯ ಇತ್ತು ಎಂದು ತೋರಿಸಿದ್ದೀರಿ ಆ ರೀತಿ ಹೇಳಲು ನೀವು ತಜ್ಞರಲ್ಲ ಮತ್ತು ಆ ಬಗ್ಗೆ ಆತನ ಬಗ್ಗೆ ಯಾವುದೇ ವರದಿಗಳನ್ನು ಪಡೆದು ಪರಿಶೀಲಿಸಿಲ್ಲ ಎಂದರೆ ಸಾಕ್ಷಿ ನಾನು ಸಂಘದ ಕಾರ್ಯದರ್ಶಿಯಾಗಿದ್ದರಿಂದ ಸಂಘದ ಪರವಾಗಿ ನ್ಯಾಯಾಲಯದ ಕಲಾಪಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗಬಾರದೆಂದು ಸದರಿ ಮನವಿಯನ್ನು ಸಲ್ಲಿಸಿದ್ದೆನು ಎನ್ನುತ್ತಾರೆ. ಆರೋಪಿಯಿಂದ ನ್ಯಾಯಾಲಯದ ಕಲಾಪಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿತ್ತು ಎಂದು ತೋರಿಸಲು ನೀವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ .

7. ಮಾನಸಿಕ ತೊಂದರೆಯಿಂದ ಆರೋಪಿ ಬಳಲುತ್ತಿದ್ದನು ಎಂದು ಹೇಳಲು ನೀವು ಯಾವುದಾದರೂ ತಜ್ಞರ ವರದಿಯನ್ನು

ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವ ಆಧಾರದ ಮೇಲೆ ಆರೋಪಿ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿದ್ದನು ಎಂದು ಹೇಳಿದ್ದೀರಿ ಎಂದರೆ ಸಾಕ್ಷಿ ಸಾಮಾನ್ಯರಿಗಿಂತ ಆತನ ವರ್ತನೆ ಭಿನ್ನವಾಗಿತ್ತು ಹಾಗಾಗಿ ಹೇಳಿದ್ದೇನೆ ಎನ್ನುತ್ತಾರೆ. ಸಾಮಾನ್ಯರಿಗಿಂತ ಭಿನ್ನರಂತೆ ನಟಿಸಲುಬಹುದು ಎಂದರೆ ಸರಿಯಲ್ಲ. ಆರೋಪಿ ವಕೀಲನಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ